ಶ್ರೀ ಬಿ. ಎಸ್. ಚವ್ಹಾಣ್.—ಎರಡು ವರ್ಷಗಳ ಹಿಂದೆ ನಡೆಯುತ್ತಿತ್ತು. ಆದರೆ, ಮಾನ್ಯ ಮಂತ್ರಿಗಳು ಸಮರ್ಪಕವಾಗಿ ಉತ್ತರ ಕೊಡುತ್ತಿಲ್ಲ.

ಅಧ್ಯಕ್ಷರು.—ಇದ್ದದ್ದು ಎಲ್ಲಿ ಹೋಯಿತು ?

ಶ್ರೀ ಬಿ. ಎಸ್. ಚವ್ಹಾಣ್.—ಅದನ್ನೇ ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಸದಸ್ಯರು, ಆ ನ್ಯಾಯಾಲಯ ನಡೆಯುತ್ತಿದ್ದನ್ನು ಕಣ್ಣಾರೆ ಕಂಡಿದ್ದರೆ ಅದು ಎಲ್ಲಿ ಹೋಯಿತು ಎಂದು ಹುಡುಕುವ ಕೆಲಸವನ್ನು ನಾನು ಮಾಡುತ್ತೇನೆ.

ಶ್ರೀ ಬಿ. ಎಸ್. ಚವ್ಹಾಣ್.—ನಾನು ಕೇಳತಕ್ಕಂಥ ವಿಷಯ ಇಷ್ಟೇ, ನ್ಯಾಯಾಲಯ ನಡೆಯುತ್ತಿತ್ತು. ಬಹುಶಃ ನನ್ನ ಗಮನಕ್ಕೆ ಬಂದ ವಿಷಯ ಏನೆಂದರೆ, ಅಲ್ಲಿ ಕೋರ್ಟ್‌ಗೆ ಸರಿಯಾದ ಬಿಲ್ಡಿಂಗ್ ಸಿಗಲಿಲ್ಲ, ಆದ್ದರಿಂದ ಅದನ್ನು ಪೆಂಡಿಂಗ್ ಇಡಲಾಗಿದೆಯೆಂದು ತಿಳಿದು ಬಂದಿದೆ.

ಅಧ್ಯಕ್ಷರು.—ಅವರು ಅದನ್ನು ಹುಡುಕುತ್ತಾರೆ. ನೆಕ್ಸ್ಟ್ ಸೆಷನ್‌ಗೆ ಮತ್ತೊಂದು ಕ್ವೆಶ್ಚನ್ ಹಾಕಿ.

ಶ್ರೀ ಬಿ. ಎಸ್. ಚವ್ಹಾಣ್.—ನಮ್ಮ ಶಹಾಬಾದ್ ಪಟ್ಟಣದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. ನಮ್ಮ ಶಹಬಾದ್ ಪಟ್ಟಣದಲ್ಲಿರುವ ಜನರುಗಳು ಕೇಸ್‌ಗಳಿಗೆ ಹೋಗಬೇಕಾದರೆ ೩೦ ಕಿಲೋಮೀಟರ್ ದೂರ ಇರುವ ಚಿತಾಪುರ ತಾಲ್ಲೂಕಿಗೆ ಹೋಗಬೇಕಾಗುತ್ತದೆ. ಚಿತಾಪುರ ಕೋರ್ಟಿನಲ್ಲಿ ನಡೆಯುವ ಕೇಸ್‌ಗಳಲ್ಲಿ ೭೫% ಪರ್ಸೆಂಟೇಷ್ಟು ನಮ್ಮ ಶಹಬಾದ್ ಪಟ್ಟಣದ ಕೇಸ್‌ಗಳೇ ಆಗಿರುತ್ತದೆ. ಆದ್ದರಿಂದ ಶಹಬಾದ್‌ನಲ್ಲಿ ಕೋರ್ಟ್ ಆಗುವುದು ಅತಿ ಅವಶ್ಯಕ. ಆದ್ದರಿಂದ ಶಹಬಾದ್‌ನಲ್ಲಿ ಬೇಗನೆ ನ್ಯಾಯಾಲಯ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಸದಸ್ಯರು ಹೇಳಿರುವ ಅಭಿಪ್ರಾಯದಂತೆಯೇ ಶಹಬಾದ್ ಪಟ್ಟಣದಲ್ಲಿ ಜೆ ಎಂ.ಎಫ್.ಸಿ. ಕೋರ್ಟ್‌ನ್ನು ಸ್ಥಾಪನೆ ಮಾಡತಕ್ಕಂಥ ಅವಶ್ಯಕತೆ ಇದೆ ಎಂದು ನಮ್ಮ ಅನಿಸಿಕೆಯೂ ಆಗಿದೆ. ಆದ್ದರಿಂದ, ಇದರ ಬಗ್ಗೆ ಉಚ್ಚ ನ್ಯಾಯಾಲಯಕ್ಕೆ ಪುನಃ ಒಂದು ಜ್ಞಾಪನ ಪತ್ರವನ್ನು ಬರೆದು ಅವರ ಮನವೊಲಿಸಿ ಜೆ.ಎಂ.ಎಫ್.ಸಿ., ಕೋರ್ಟ್ ಸ್ಥಾಪನೆ ಆಗುವ ರೀತಿಯಲ್ಲಿ ಒತ್ತಾಯ ಮಾಡಿ ಅಲ್ಲಿ ಕೋರ್ಟ್ ಆಗುವ ಹಾಗೆ ನಾವು ಪ್ರಯತ್ನವನ್ನು ಮಾಡುತ್ತೇವೆ.

ಬೋರನ ಕಣಿವೆ ಅಣೆಕಟ್ಟೆಗೆ ಹೇಮಾವತಿ ನಾಲೆಯಿಂದ ನೀರನ್ನು ಒದಗಿಸುವುದು

೧೦೪೯. ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) — ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಕಳ್ಳಂಬೆಳ್ಳ ಕ್ಷೇತ್ರದ ಸಿರಾ ತಾಲ್ಲೂಕಿನ ಕಳ್ಳಂಬೆಳ್ಳ ಕೆರೆ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೋರನ ಕಣಿವೆ ಅಣೆಕಟ್ಟುಗಳ ಅಚ್ಚುಕಟ್ಟು ಪ್ರದೇಶವು ತೆಂಗಿನ ಬೆಳೆ ಪ್ರದೇಶವೆಂದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ, ಬೋರನ ಕಣಿವೆ ಅಣೆಕಟ್ಟು ಮತ್ತು ಕಳ್ಳಂಬೆಳ್ಳ ಕೆರೆಯ ಅಚ್ಚುಕಟ್ಟುದಾರರಿಗೆ ತಾತ್ಕಾಲಿಕ ಪರಿಹಾರ ಒದಗಿಸಲು ಹೇಮಾವತಿ ನಾಲೆಯಿಂದ ನೀರನ್ನು ಹಾಯಿಸಲು ಸರ್ಕಾರವು ಪರಿಶೀಲಿಸುವುದೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು)—

(ಅ) ಬಂದಿದೆ.

(ಆ) ಬೋರನ ಕಣಿವೆ ಕಣಿಕಟ್ಟು ಮತ್ತು ಕಳ್ಳಂಬೆಳ್ಳ ಕೆರೆಯು ಕಾವೇರಿ ಕೊಳ್ಳದಲ್ಲಿರುವುದಿಲ್ಲ ಹಾಗೂ ಕಾವೇರಿ ನೀರನ್ನು ಕೊಳ್ಳದಿಂದ ಕೊಳ್ಳಕ್ಕೆ ವರ್ಗಾಯಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ಬೋರನ ಕಣಿವೆ ಮತ್ತು ಕಳ್ಳಂಬೆಳ್ಳ ಕೆರೆಗೆ ಕಾವೇರಿ ಬೇಸಿನ್‌ನಿಂದ ಹೇಮಾವತಿ ನೀರನ್ನು ಡೈವರ್ಟ್ ಮಾಡಿಕೊಡುತ್ತೀರಾ ಎನ್ನುವುದಕ್ಕೆ ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಸರ್ವೇ ಸಾಮಾನ್ಯವಾಗಿ ಈ ಉತ್ತರ ಕೊಡುತ್ತಾರೆಂದು ನಮಗೆ ಮೊದಲೇ ಗೊತ್ತಿದ್ದ ವಿಚಾರವಾಗಿತ್ತು. ತಾವು ಸಹಾ ರೈತ ಕುಟುಂಬದಿಂದ ಬಂದಿರತಕ್ಕವರು.

ರೈತರ ಕಷ್ಟವನ್ನು ಅರಿತಿರತಕ್ಕವರು. ತೆಂಗಿನ ಬೇಸಾಯ ಮಾಡುವವರಾಗಿದ್ದಿರಿ. ಈಗ ಸುಮಾರು ೧೦ ವರ್ಷಗಳಿಂದ ನಮ್ಮ ತುಮಕೂರು ಜಿಲ್ಲೆಯಂ ಯಾವ ಕೆರೆಗಳೂ ತುಂಬಿಲ್ಲ. ತುಮಕೂರು ಜಿಲ್ಲೆಯಲ್ಲಿ ಈ ಎರಡು ಕೆರೆಗಳು ಮಾತ್ರ ದೊಡ್ಡವು, ತುಮಕೂರು ಜಿಲ್ಲೆಗೆ ಹೇಮಾವತಿ ನೀರು ಬಂದಾಗ ಈ ಕೆರೆಗಳಿಗೆ ನೀರು ಕೊಡುವುದಕ್ಕೆ ಸಾಧ್ಯವೇ ಹೊರತು ಈಗ ಆಗುವುದಿಲ್ಲ. ಇದನ್ನು ನೀವು ಇಲ್ಲ ಎಂದರೆ ಕಷ್ಟವಾಗುತ್ತದೆ. ತಾವು ಪರಿಶೀಲನೆ ಮಾಡುತ್ತೇವೆ ಎನ್ನುತಕ್ಕ ಮಾತನ್ನು ಹೇಳಿದರೆ ಬಹಳ ಒಳ್ಳೆಯದು. ಇದನ್ನು ಮಾಡುವುದರಿಂದ ಫೈನಾನ್ಸ್ ಬರ್ಡನ್ ಏನೂ ಬರುವುದಿಲ್ಲ. ರೈತರ ಹಿತದೃಷ್ಟಿಯಿಂದ ಇದನ್ನು ಮಾಡುವುದಕ್ಕೆ ತಾವು ಒಪ್ಪಿಕೊಳ್ಳಬೇಕಂ. ಪರಿಶೀಲನೆ ಮಾಡುತ್ತೇವೆ ಎಂಬ ಒಂದು ಮಾತನಾದರೂ ಹೇಳಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಇವು ಕೃಷ್ಣಾ ಬೇಸಿನ್‌ಗೆ ಬರತಕ್ಕಂಥ ಕೆರೆಗಳು ಒಂದು ಬೇಸಿನ್‌ನಿಂದ ಇನ್ನೊಂದು ಬೇಸಿನ್‌ಗೆ ನೀರು ಬಿಡುವುದಕ್ಕೆ ಕಾನೂನು ದೃಷ್ಟಿಯಿಂದ ಸಾದುವಲ್ಲವೆಂದು ಅವರಿಗೂ ಗೊತ್ತಿದೆ. ಮೇಲಾಗಿ ಕಾವೇರಿ ಜಲವಿವಾದ ಇರುವುದು ತಮಗೂ ಗೊತ್ತಿದೆ. ಅಂಥಾದ್ದರಲ್ಲಿ ಆ ನೀರನ್ನು ನೇರ ಕಡೆ ತೆಗೆದುಕೊಂಡು ಹೋಗುತ್ತೇವೆಂದರೆ ಅದು ಬಹುಶಃ ಸಾದುವಲ್ಲ, ಆ ಕಾರಣದಿಂದ ಈ ಕೆರೆಗಳಿಗೆ ನೀರನ್ನು ಒದಗಿಸತಕ್ಕಂಥಾದ್ದು ಕಾನೂನು ದೃಷ್ಟಿಯಿಂದ ಸಾದುವಲ್ಲವೆಂದು ಸ್ಪಷ್ಟವಾಗಿ ಅಧ್ಯಕ್ಷರ ಮೂಲಕ ಹೇಳಬಯಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ. — ತಮಿಳುನಾಡಿನವರಿಗೆ ನೀರು ಬೇಕಾದರೆ ಕೊಡುವುದಕ್ಕೆ ತಯಾರಾಗಿದ್ದಾರೆ. ಆದರೆ ನಮಗೆ ನೀರು ಕೊಡುವುದಕ್ಕೆ ತಯಾರಿಲ್ಲವೆಂದರೆ ಹೇಗೆ ?

ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯ ಕೆಲಸ

೯೩೫. ಶ್ರೀ ಪಿ. ಸಿ. ಸಿದ್ದನಗೌಡರ್ (ಕುಲಘಟ್ಟಗಿ)— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯ ಕೆಲಸ ಯಾವಾಗ ಪ್ರಾರಂಭವಾಯಿತು ?

(ಆ) ಈ ಬೈಪಾಸ್ ರಸ್ತೆಯ ನಿರ್ಮಾಣ ಕಾರ್ಯಕ್ಕಾಗಿ ಎಷ್ಟು ಹಣ ಮೀಸಲಾಗಿಟ್ಟಿದೆ ?

(ಇ) ಇದುವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ.

(ಈ) ಈ ಕೆಲಸ ಪೂರ್ಣಗೊಳ್ಳಲು ಇನ್ನೂ ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು)—

(ಅ) ೩೦ ಕಿ.ಮೀ ಉದ್ದದ ಬೈಪಾಸ್ ರಸ್ತೆ ಕೆಲಸವನ್ನು ಎರಡು ಹಂತಗಳಲ್ಲಿ ಮಾಡಲಾಗುವುದು. ಮೊದಲನೇ ಹಂತದ ಕೆಲಸ ಜುಲೈ ೧೯೮೭ರಲ್ಲಿ ಪ್ರಾರಂಭವಾಗಿದೆ.

(ಆ) ಈ ಬೈಪಾಸ್ ಕೆಲಸಕ್ಕಾಗಿ ೬೫೦ ಲಕ್ಷ ರೂ.ಗಳನ್ನು ಮೀಸಲಾಗಿಡಲಾಗಿದೆ,

(ಇ) ಮೊದಲನೇ ಹಂತಕ್ಕೆ ಈವರೆಗೆ ೨೦೦ ಲಕ್ಷ ರೂ.ಗಳು ಖರ್ಚಾಗಿದೆ.

(ಈ) ಮೊದಲನೇ ಹಂತದ ಸುಮಾರು ೧೭ ಕಿ.ಮೀ. ಕೆಲಸವು ೧೯೯೧ರ ಅಂತ್ಯಕ್ಕೆ ಪೂರ್ಣಗೊಳ್ಳುವುದು.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯ ಕೆಲಸ ಯಾವಾಗ ಪ್ರಾರಂಭ ಆಯಿತು, ಇದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದಾರೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಅಧಿಕಾರಿಗಳು ಕೊಟ್ಟ ಲೆಕ್ಕ ಸರಿಯಿಲ್ಲ ಎಂದು ನಾನು ಹೇಳುತ್ತೇನೆ. ತಾವೂ ಒಪ್ಪಿ ಬಹುದು ಆದರೆ ಎರಡು ಕೋಟಿ ರೂಪಾಯಿ ಹೇಗೆ ಖರ್ಚು ಆಗುತ್ತದೆ ಎಂದು ಸ್ವಲ್ಪಮಟ್ಟಿಗೆ ನಮಗೆ ಅನುಮಾನ ಬರುತ್ತದೆ. ಎರಡು ಕೋಟಿ ರೂಪಾಯಿ ಕರೆಕ್ಟಾಗಿ ಖರ್ಚು ಆಗಿದೆಯೋ ಅಥವಾ ಸ್ವಲ್ಪ ಹೆಚ್ಚುಕಡಿಮೆ ಆಗಿದೆಯೋ ? ಇದರಲ್ಲಿ ಎರಡು ಸ್ಟೇಜ್ ಮಾಡಿದ್ದಾರೆ. ಮೊದಲನೆಯ ಸ್ಟೇಜ್‌ಗೆ ೨ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎರಡನೇ ಸ್ಟೇಜ್ ಮುಗಿಸಬೇಕಾದರೆ ಆರೂವರೆ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಸಂಪೂರ್ಣವಾಗಿ ಈ ಕೆಲಸ ಯಾವಾಗ ಮುಗಿಯುತ್ತದೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ ?